Phone: 91- 080-23330984/149
Telefax: 91- 080-23330984

NAAC A+ Accredited

Website: www.uasbangalore.edu.in
Email: registrar@uasbangalore.edu.in

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕುಲಸಚಿವರ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು

# UNIVERSITY OF AGRICULTURAL SCIENCES, BANGALORE

Office of the Registrar, GKVK, Bengaluru-560065

ಸಂಖ್ಯೆ: ಕುಸ/ಸಕುಸ/ಹಿಕ್ಷೇಸ/ಮು.ಕೌ.-ಐಸಿಎಆರ್/2025-26 ದಿನಾಂಕ: 30.12.2025

## ಅಧಿಸೂಚನೆ

**ವಿಷಯ:** ರಾಜ್ಯದ ವಿವಿಧ ಕೃಷಿ ಮತ್ತು ಕೃಷಿ ಸಂಬಂಧಿತ ವಿಶ್ವವಿದ್ಯಾನಿಲಯಗಳಲ್ಲಿ (ಪಮೀವಿ, ಬೀದರ್ ಹೊರತುಪಡಿಸಿ) ವಿವಿಧ ಸ್ನಾತಕ ಪದವಿಗಳಿಗೆ ಐಸಿಎಆರ್ ಕೋಟಾದಡಿ 2025-26, (CUET/ICAR, New Delhi) ಭರ್ತಿಯಾಗದೇ ಉಳಿದಿರುವ ಸೀಟುಗಳಿಗೆ ದಿನಾಂಕ: 09.01.2026 ರಂದು ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆ ನಡೆಸುವ ಕುರಿತು.

ಉಲ್ಲೇಖ:
1. ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಸ್ನಾತಕ ಪದವಿಗಳ ಸಮಿತಿ ಸಭೆಯಯ (ಆನ್‌ಲೈನ್ (Online)) ನಡಾವಳಿಗಳ ದಿನಾಂಕ: 30.12.2025.
2. ಶಿಕ್ಷಣ ನಿರ್ದೇಶಕರು ಮತ್ತು ಮಾನ್ಯ ಕುಲಪತಿಗಳು, ಕೃವಿವಿ, ಬೆಂಗಳೂರು ಇವರ ಅನುಮೋದನೆಯ ದಿನಾಂಕ: 30.12.2025

*****

ಶೈಕ್ಷಣಿಕ ವರ್ಷ 2025-26ನೇ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು; ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ; ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ, ರಾಯಚೂರು; ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ; ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆ ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಮಂಡ್ಯ ಈ ವಿಶ್ವ ವಿದ್ಯಾನಿಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಐ.ಸಿ.ಎ.ಆರ್ (CUET/ICAR-2025) ಅಡಿಯಲ್ಲಿ ನಡೆಸಿದ ಅಂತಿಮ ಸುತ್ತಿನ ಪ್ರವೇಶಾತಿ ಪ್ರಕ್ರಿಯೆಯ ನಂತರವೂ ಭರ್ತಿಯಾಗದೆ ಉಳಿದಿರುವ ಪ್ರವರ್ಗವಾರು ಸೀಟುಗಳನ್ನು ದಿನಾಂಕ 09.01.2026 ರಂದು ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆ ಮೂಲಕ ಈ ಕೆಳಗಿನ ವೇಳಾಪಟ್ಟಿಯ ಅನುಸಾರ ಭರ್ತಿ ಮಾಡಲಾಗುವುದು.

| ಪ್ರಕ್ರಿಯೆಗಳು | ದಿನಾಂಕ ಮತ್ತು ಸಮಯ | ಸ್ಥಳ |
|---|---|---|
| ಆನ್‌ಲೈನ್ (Online) ಮೂಲಕ ಅರ್ಜಿ ಸಲ್ಲಿಕೆ | 01.01.2026 ರಿಂದ 06.01.2026 ರವರೆಗೆ (ಸಂಜೆ 4.00 ಗಂಟೆ) | ಎಲ್ಲಾ ವಿಶ್ವವಿದ್ಯಾನಿಲಯಗಳ ಅಧಿಕೃತ ಜಾಲತಾಣಗಳು:<br>www.uasbangalore.edu.in<br>www.uasd.edu.in<br>www.uasraichur.edu.in<br>www.uasbagalkot.edu.in<br>www.uahs.in<br>www.uasmandya.co.in |
| ಅರ್ಜಿಗಳ ಪರಿಶೀಲನೆ | 07.01.2026 | - |
| ಅಭ್ಯರ್ಥಿಗಳಿಗೆ ಸ್ಪಷ್ಟೀಕರಣ | 08.01.2026 | ಆಯಾ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಕಛೇರಿ |
| ಮುಕ್ತ ಕೌನ್ಸಲಿಂಗ್ ಮತ್ತು ಪ್ರವೇಶಾತಿ | 09.01.2026 ರಂದು ಬೆಳಗ್ಗೆ 09.00 ಗಂಟೆಯಿಂದ | ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಭವನ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ. ಬೆಂಗಳೂರು. |
| ಅಭ್ಯರ್ಥಿಗಳು ಕಾಲೇಜುಗಳಿಗೆ ವರದಿ ಮಾಡಿಕೊಳ್ಳುವ ದಿನಾಂಕ | 10.01.2025 ಬೆಳಗ್ಗೆ 9.00 ರಿಂದ | ಆಯಾ ಕಾಲೇಜುಗಳ ಆವರಣ |
| ತರಗತಿಗಳಿಗೆ ಹಾಜರಾಗುವ ದಿನಾಂಕ | 12.01.2025 ಬೆಳಗ್ಗೆ 9.00 ರಿಂದ | ಆಯಾ ಕಾಲೇಜುಗಳ ಆವರಣ |

ಅನ್‌ಲೈನ್ ಅರ್ಜಿ ಶುಲ್ಕ: 1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪರ್ವಗ-1 ಅಭ್ಯರ್ಥಿಗಳಿಗೆ ರೂ. 250/-
2. ಇತರೆ ಅಭ್ಯರ್ಥಿಗಳಿಗೆ ರೂ. 500/-

ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಪ್ರವೇಶಾತಿ ಬಯಸುವ ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕದೊಂದಿಗೆ ಅರ್ಜಿಯನ್ನು ಆನ್‌ಲೈನ್ (Online) ಮೂಲಕ ಮಾತ್ರ ಸಲ್ಲಿಸತಕ್ಕದ್ದು ಹಾಗೂ ಅರ್ಜಿ ಸಲ್ಲಿಸುವಾಗ ಅರ್ಜಿಯ ಶುಲ್ಕವನ್ನು ಸಹ ಆನ್‌ಲೈನ್ (Online) ಮೂಲಕವೇ ಪಾವತಿಸಬೇಕಾಗಿರುತ್ತದೆ. ಅಂಚೆ ಅಥವಾ ಇತರೆ ಮೂಲಗಳಿಂದ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ರಾಜ್ಯದ ಕೃಷಿ/ತೋಟಗಾರಿಕೆ ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯನ್ನು ಒಂದೇ ಸ್ಥಳದಲ್ಲಿ ಅಂದರೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು (ಜಿ.ಕೆ.ವಿ.ಕೆ. ಆವರಣ) ಇಲ್ಲಿಯೇ ನಡೆಸಲಾಗುವುದು.

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಸ್ನಾತಕ ಪದವಿಗಳಿಗೆ ನಡೆಸಿದ (CUET (ICAR) UG-2025) ಪರೀಕ್ಷೆಗಳನ್ನು ಬರೆದು ರ್‍ಯಾಂಕ್ ಪಡೆದ ಕರ್ನಾಟಕದ ಅಭ್ಯರ್ಥಿಗಳು ಮಾತ್ರ ಅರ್ಹರಾಗಿದ್ದು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತಾರೆ.

1. CUET (ICAR) ಕೋಟಾದಡಿ ಭಾಗವಹಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ CUET (ICAR) ನಡೆಸುವ ಪ್ರವೇಶಾತಿ ಪರೀಕ್ಷೆ ಬರೆದಿದ್ದು ICAR ನೀಡಿದ ರ್‍ಯಾಂಕ್ ಪಟ್ಟಿ ಹಾಗೂ ರಿಜಿಸ್ಟ್ರೇಷನ್‌ಗೆ ಅರ್ಹರಾಗಿರುವ ಪ್ರತಿಯನ್ನು ಕಡ್ಡಾಯವಾಗಿ ಹೊಂದಿರಬೇಕು.
2. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಪ್ರಕಟಿಸಿರುವ ಪ್ರವರ್ಗದಡಿಗಳಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸೀಟುಗಳನ್ನು ನಿಯಮಾನುಸಾರ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗುವುದು.
3. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು NTS Scholarship ಪಡೆಯಲು ಅರ್ಹರಾಗಿರುವುದಿಲ್ಲ.
4. ಈಗಾಗಲೇ **KCET-2025-26** ಮತ್ತು CUET (ICAR) – 2025 ಪ್ರವೇಶಾತಿ ಪ್ರಕ್ರಿಯೆಯಿಂದ ಆಯ್ಕೆಯಾಗಿ, ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ / ಇಂಜಿನಿಯರಿಂಗ್ / ವೈದ್ಯಕೀಯ (NEET) ಯಾವುದೇ ಪದವಿಗಳಿಗೆ ಮತು (NRI) ಕೋಟಾದಡಿ ರಾಜ್ಯದ ಯಾವುದೇ ಕೃಷಿ / ತೋಟಗಾರಿಕೆ ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಿಲ್ಲ. ಆದರೆ ಅಧಿಕೃತ ಅಧಿಕಾರಿಗಳಿಂದ/ಕುಲಸಚಿವರಿಂದ ಪಡೆದ ಪ್ರವೇಶ ರದ್ದತಿ ಆದೇಶವನ್ನು ಲಗತ್ತಿಸಿದ್ದಲ್ಲಿ ಅಭ್ಯರ್ಥಿಯ ಅರ್ಜಿಯನ್ನು ಪ್ರವೇಶಾತಿ ಸಮಿತಿಯು ಪರಿಶೀಲಿಸಿದ ನಂತರ ಪರಿಗಣಿಸಲಾಗುವುದು.
5. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ CUET (ICAR-UG)-2025 ಪ್ರವೇಶಾತಿ ಪ್ರಕ್ರಿಯೆಯಲ್ಲಿ ಪರಿಶೀಲಿಸಲಾಗಿದ್ದ/ಸಲ್ಲಿಸಿದ್ದ ಎಲ್ಲಾ ಮೂಲ ದಾಖಲಾತಿಗಳನ್ನು ಮತ್ತು ಮೂಲ ದಾಖಲಾತಿಗಳ ಎರಡು ಸೆಟ್ ಜೆರಾಕ್ಸ್ ಪ್ರತಿಗಳನ್ನು ಪರಿಶೀಲನೆಗೆ ತರಬೇಕಾಗಿರುತ್ತದೆ, ಇಲ್ಲವಾದಲ್ಲಿ ಅಭ್ಯರ್ಥಿಗಳು ಮತ್ತು ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.
6. ಸದರಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳು **ರೂ. 39,780/- ಪ್ರವೇಶ ಶುಲ್ಕವನ್ನು ನಗದಾಗಿ ಸ್ಥಳದಲ್ಲಿಯೇ ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ**. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ: ಪೋಷಕರ ವಾರ್ಷಿಕ ವರಮಾನ ರೂ. 2.5 ಲಕ್ಷದೊಳಗೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳು ಪ್ರವೇಶ ಶುಲ್ಕವನ್ನು ಪಾವತಿಸುವಂತಿಲ್ಲ, ವಾರ್ಷಿಕ ವರಮಾನ ರೂ. 2.5 ಲಕ್ಷದಿಂದ ರೂ. 10 ಲಕ್ಷದೊಳಗಿದ್ದರೆ ಒಟ್ಟು ಪ್ರವೇಶ ಶುಲ್ಕದ ಶೇ. 50 ರಷ್ಟು (ರೂ. 19,890) ಮೊತ್ತವನ್ನು ಮುಕ್ತ ಕೌನ್ಸಲಿಂಗ್ ಪ್ರವೇಶಾತಿಯ ಸಮಯದಲ್ಲಿ ಪಾವತಿಸಬೇಕು. ವಾರ್ಷಿಕ ವರಮಾನ 10 ಲಕ್ಷಕ್ಕಿಂತ ಹೆಚ್ಚಿದಲ್ಲಿ ಸಾಮಾನ್ಯ ಅಭ್ಯಥಿಗಳಿಗೆ ನಿಗದಿ ಪಡಿಸಿರುವ ಪೂರ್ಣ ಶುಲ್ಕವನ್ನು (ರೂ. 39,780) ಪಾವತಿಸಬೇಕು. (ಇತರೆ ಶುಲ್ಕಗಳನ್ನು ಆಯಾ ವಿಶ್ವವಿದ್ಯಾನಿಲಯಗಳ ಸೂಚನೆಯಂತೆ ಅಭ್ಯರ್ಥಿಗಳು ಪಾವತಿಸತಕ್ಕದ್ದು) ಇಲ್ಲವಾದಲ್ಲಿ ಅಭ್ಯರ್ಥಿಗಳ ಸೀಟನ್ನು ರದ್ದುಗೊಳಿಸಲಾಗುವುದು.

7. ಮುಕ್ತ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.
8. ಈ ಮುಕ್ತ ಕೌನ್ಸಲಿಂಗ್ ಮತ್ತು ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಒಮ್ಮತದ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಯ್ಕೆಯಾದ ಅಭ್ಯರ್ಥಿಗಳು ಆಯಾ ವಿಶ್ವವಿದ್ಯಾನಿಲಯ / ಕಾಲೇಜುಗಳಿಗೆ ದಿನಾಂಕ 10.01.2026ರ ಸಾಯಾಂಕಾಲ 4.00 ಘಂಟೆಯೊಳಗೆ ಕಡ್ಡಾಯವಾಗಿ ವರದಿ ಮಾಡಿಕೊಂಡು ಪ್ರವೇಶಾತಿ ಪಡೆಯಬೇಕು.

ಆದೇಶದ ಮೇರೆಗೆ

30/12/25

**ಕುಲಸಚಿವರು**
ಕೃವಿವಿ, ಬೆಂಗಳೂರು
(ರಾಜ್ಯದ ಎಲ್ಲಾ ಕೃಷಿ ಮತ್ತು
ತೋಟಗಾರಿಕಾ ವಿಶ್ವವಿದ್ಯಾನಿಲಯಗಳ ಪರವಾಗಿ)

ಕುಲಸಚಿವರು
ಕೃಷಿ ವಿಶ್ವವಿದ್ಯಾನಿಲಯ
ಗಾ.ಕೃ.ವಿ.ಕೇ, ಬೆಂಗಳೂರು-560 065.

**ಪ್ರತಿಗಳು:**

1. ಮಾನ್ಯ ಕುಲಪತಿಗಳು / ಶಿಕ್ಷಣ ನಿರ್ದೇಶಕರು / ಕುಲಸಚಿವರು, ಕೃವಿವಿ, ಬೆಂಗಳುರು / ಧಾರವಾಡ / ರಾಯಚೂರು / ಮಂಡ್ಯ, ಕೃತೋವಿ, ಶಿವಮೊಗ್ಗ/ತೋವಿ, ಬಾಗಲಕೋಟೆ.
2. ಟೀಮ್ ಲೀಡರ್, ಎನ್.ಐ.ಸಿ.